ಓ ಎಸ್ ನಂಃ 213/2022. ಪಿ ಡಬ್ಲ್ಯೂಃ 1

ದಿನಾಂಕಃ 15.03.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಮಾಡಿಸಲಾಯಿತು.

ಮುಖ್ಯ ವಿಚಾರಣೆಃ ಶ್ರೀ ಟಿ ಎನ್ ವಕೀಲರಿಂದ

ನಾನು ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು ಅದರಲ್ಲಿ ಬರೆದಿರುವ ಎಲ್ಲಾ ಸಂಗತಿಗಳು ನಿಜವಿರುತ್ತವೆ.

ವಂಶವೃಕ್ಷದ ಸಲುವಾಗಿ ನಾನು ಬರೆದುಕೊಂಡ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದು ನಿಪಿಃ 1 ಎಂದು, ವಂಶವೃಕ್ಷ ದೃಡೀಕರಣ ಪತ್ರವನ್ನು ಹಾಜರುಪಡಿಸಿದ್ದು ನಿಪಿಃ 2 ಎಂದು, ದಿನಾಂಕ 24-08-1950 ಬರೆಯಲಾದ ವಿಕ್ರಯ ಪತ್ರದ ದೃಡೀಕೃತ ಪ್ರತಿಯನ್ನು ಹಾಜರುಪಡಿಸಿದ್ದು ನಿಪಿಃ3 ಎಂದು, ಕೈ ಬರವಣಿಗೆಯಲ್ಲಿದ್ದ 12 ಪಹಣಿ ಪತ್ರಿಕೆಗಳ ದೃಡೀಕೃತ ಪ್ರತಿಗಳನ್ನು ಹಾಜರುಪಡಿಸಿದ್ದು ನಿಪಿಃ 4 ರಿಂದ 15 ಎಂದು, 2 ಮುಟೇಷನ್ ದೃಡೀಕೃತ ಪ್ರತಿಗಳನ್ನು ಹಾಜರುಪಡಿಸಿದ್ದು ನಿಪಿಃ 16 ಮತ್ತು 17 ಎಂದು, 2 ಋಣಾಬಾರ ಪ್ರಮಾಣ ಪತ್ರಗಳನ್ನು ಹಾಜರುಪಡಿಸಿದ್ದು ನಿಪಿಃ 18 ಮತ್ತು 19 ಎಂದು, ಜೆ ಫಾರಂ ದೃಡೀಕೃತ ಪ್ರತಿಯನ್ನು ಹಾಜರುಪಡಿಸಿದ್ದು ನಿಪಿಃ 20 ಎಂದು, ಇನ್ನೊಂದು ಋಣಾಬಾರ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದು ನಿಪಿಃ 21 ಎಂದು, 8 ಕೈ ಬರವಣಿಗೆಯಲ್ಲಿದ್ದ 8 ಪಹಣಿ ಪತ್ರಿಕೆಗಳ ದೃಡೀಕೃತ ಪ್ರತಿಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿಃ 22 ರಿಂದ 29 ಎಂದು, ಮುಟೇಷನ್ ಪ್ರತಿಯನ್ನು ಹಾಜರುಪಡಿಸಿದ್ದು ನಿಪಿಃ 30 ಎಂದು, 32 ಗಣಕಿಕೃತ ಪಹಣಿ ಪತ್ರಿಕೆಗಳನ್ನು ಹಾಜರುಪಡಿಸಿದ್ದು ನಿಪಿಃ 31 ರಿಂದ 62 ಎಂದು, ಮುಟೇಷನ್ ಪ್ರತಿಯನ್ನು ಹಾಜರುಪಡಿಸಿದ್ದು ನಿಪಿಃ 63 ಎಂದು ಗುರುತಿಸಲಾಯಿತು,

ಮುಂದುವರೆದ ಮುಖ್ಯ ವಿಚಾರಣೆಗೆ ಸಮಯ ಕೋರಿದ್ದು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸರಿ ಇದೆ

ಸಿವಿಲ್ ನ್ಯಾಯಾಧೀಶರು ಸಿರುಗುಪ್ಪ.